# ವಿದ್ಯುಚ್ಛಕ್ತಿ ಲೋಕಪಾಲರ ಸಮಕ್ಷಮದಲ್ಲಿ

ಸಂಖ್ಯೆ: 16, ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, (ಜೈನ್ ಆಸ್ಪತ್ರೆ ಹಿಂಭಾಗ),
ವಸಂತನಗರ, ಬೆಂಗಳೂರು–560052.

**ಉಪಸ್ಥಿತಿ: ಶ್ರೀಮತಿ ಆರ್. ಶಾರದ,**
**ವಿದ್ಯುಚ್ಛಕ್ತಿ ಲೋಕಪಾಲರು**

**ಪ್ರಕರಣ ಸಂಖ್ಯೆ: OMB/G/G-427/2021**

**ಆದೇಶ ದಿನಾಂಕ: 25.08.2021**

ಶ್ರೀ ಕೊಳ್ಳ ನರೇಂದ್ರ ಬಾಬು,
ಶ್ರೀ ಲಕ್ಷ್ಮೀ ವೆಂಕಟಾದ್ರಿ ಆಗ್ರೊ ಫುಡ್ಸ್,
ಮಂಚಲಾಪೂರ ರಸ್ತೆ,
ರಾಯಚೂರು – 584101.

**ಪ್ರತಿನಿಧಿಸುವವರು:**
ಶ್ರೀರಂಗ ಅಸೋಸಿಯೇಟ್ಸ್,
#1, 2ನೇ ಮಹಡಿ, ಅಮರ್ ಟೊವರ್ಸ್,
1ನೇ ಅಡ್ಡರಸ್ತೆ, ಗಾಂಧಿನಗರ,
ಬೆಂಗಳೂರು – 560009. – ದೂರುದಾರರು/ಮೇಲ್ಮನವಿದಾರರು

V/S

1. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ),
ಕಾರ್ಯ ಮತ್ತು ಪಾಲನ ನಗರ ಉಪ ವಿಭಾಗ–2, ಗುವಿಸಕಂನಿ,
ಮುಖ್ಯ ಗುವಿಸಕಂನಿ ಬಿಲ್ಡಿಂಗ್ ಎದುರು,
ರಾಯಚೂರು – 584101.

2. ಅಧ್ಯಕ್ಷರು,
ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ,
ಕಾರ್ಯ ಮತ್ತು ಪಾಲನ ವೃತ್ತ, ಗುವಿಸಕಂನಿ,
ಬಸವೇಶ್ವರ ವೃತ್ತದ ಹತ್ತಿರ, ಎಲ್.ಐ.ಸಿ ಕಛೇರಿ ಎದುರು,
ರಾಯಚೂರು–584101. – ಪ್ರತಿವಾದಿಗಳು

ಈ ಮೇಲ್ಮನವಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ (ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ ಮತ್ತು ಲೋಕಪಾಲ) ನಿಯಮಗಳ ಅಡಿಯಲ್ಲಿ, ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ, ರಾಯಚೂರು, ಪ್ರಕರಣ

ಸಂಖ್ಯೆ: CGRF 11/2020, ಆದೇಶ ಸಂಖ್ಯೆ: ಅಅ/ಉಲೆನಿ/ಹಿಆಸ/2020-21/CYS-53, ಇವರ ದಿನಾಂಕ 16.03.2021ರ (Annexure-A), ಆದೇಶದ ವಿರುದ್ಧ ದಾಖಲಿಸಲಾಗಿದೆ.

1) ಈ ಪ್ರಕರಣದ ಸಾರಾಂಶವೇನೆಂದರೆ, ರಾಯಚೂರು ನಗರ ಮಂಚಲಾಪುರ ರಸ್ತೆಯಲ್ಲಿರುವ ಶ್ರೀ ಲಕ್ಷ್ಮೀ ವೆಂಕಟಾದ್ರಿ ಆಗ್ರೋ ಫುಡ್ಸ್ ಇದಕ್ಕೆ ಸಂಬಂಧಿಸಿದ ವಿದ್ಯುತ್ ಸ್ಥಾವರ ಸಂಖ್ಯೆ HTR140 ಆಗಿರುತ್ತದೆಂದು, ಇದಕ್ಕೆ ಸಂಬಂಧಿಸಿದಂತೆ ಅಪೀಲುದಾರರಾದ ಶ್ರೀ ಕೊಳ್ಳ ನರೇದ್ರಬಾಬು ರವರು ಗ್ರಾಹಕರಾಗಿದ್ದು ತಾವು ಬಳಿಸಿದ ವಿದ್ಯುತ್ ಬಿಲ್ಲನ್ನು ಕ್ರಮವಾಗಿ ಪಾವತಿ ಮಾಡುತ್ತಿರುತ್ತಾರೆಂದೂ, ಈ ರೀತಿ ಇರುವಾಗ್ಯೆ ದಿನಾಂಕ 11.11.2020 ರಂದು ಒಂದನೇ ಪ್ರತಿವಾದಿ ಕಂಪನಿಯು ಯಾವುದೇ ಆಧಾರವಿಲ್ಲದೇ ಹಾಗೂ ನೋಟಿಸ್ ನೀಡದೇ ರೂ. 60,14,208/- ಗಳನ್ನು, ನವೆಂಬರ್ 2020 ತಿಂಗಳಲ್ಲಿ ಶಾರ್ಟ್ ಕ್ಲೈಮ್ (Short Claim) ಎಂಬುದಾಗಿ ವಿಧಿಸಿರುತ್ತದೆಂದು ಹಾಗೂ ದಿನಾಂಕ 01.07.2018ರಿಂದ 01.09.2020ರವರೆಗೆ ಈ ಶಾರ್ಟ್ ಕ್ಲೈಮ್ (Short Claim) ಅವಧಿಯನ್ನು ನಿಗಧಿಪಡಿಸಿರುತ್ತದೆಂದು, ಮತ್ತು ದಿನಾಂಕ 25.09.2020ರಂದು ಗ್ರಾಹಕರಿಗೆ/ಅಪೀಲುದಾರರಿಗೆ ನೋಟಿಸ್‌ನ್ನು ನೀಡಿರುತ್ತಾರೆಂದೂ, ಆದರೆ ಈ ನೋಟಿಸು ಅಪೀಲುದಾರರಿಗೆ ತಲುಪಿಲ್ಲವೆಂದು, ಇದಾದ ಮೇಲೆ 11.11.2020 ರಂದು ಮೊದಲ ಬಾರಿಗೆ ಅಪೀಲುದಾರರಿಗೆ ಡಿಮಾಂಡ್ ನೋಟಿಸ್ (Demand Notice) ಬಂದಿರುತ್ತದೆಂದು ಈ ನೋಟಿಸ್ ಮೂಲಕ ರೂ. 60,14,208/-ಗಳನ್ನು ಪಾವತಿ ಮಾಡುವಂತೆ ಡಿಮಾಂಡ್ ಮಾಡಲಾಗಿರುತ್ತದೆಂದು ಆದರೆ ಅಪೀಲುದಾರರು ದಿನಾಂಕ 19.11.2020ರಂದು ಪ್ರತ್ಯುತ್ತರವನ್ನು ಕಳಿಸುತ್ತಾ ತಾವು ಯಾವುದೇ ಶಾರ್ಟ್

ಕ್ಲೈಮ್ (Short Claim) ಹಣವನ್ನು ಪಾವತಿಮಾಡಬೇಕಾಗಿಲ್ಲವೆಂದು ನುಡಿದಿರುವುದು ಕಂಡು ಬಂದಿರುತ್ತದೆ.

2) ತದನಂತರ ದಿನಾಂಕ 28.12.2020ರಂದು ಒಂದನೇ ಪ್ರತಿವಾದಿ ಕಂಪನಿಯು ಅಪೀಲುದಾರರಿಗೆ ಮತ್ತೊಂದು ನೋಟಿಸ್‌ನ್ನು ನೀಡುತ್ತಾ ಆ ಮೂಲಕ ಮೇಲೆ ಕಾಣಿಸಿದ ಪೂರ್ತಿ ಹಣವನ್ನು ಪಾವತಿ ಮಾಡುವಂತೆ ಡಿಮಾಂಡ್ ಮಾಡಿರುವುದು ಕಂಡುಬರುತ್ತದೆ. ಅಪೀಲುದಾರರು ನೀಡಿದ ಮರುತ್ತರವನ್ನು ಎದುರುದಾರರು ಗಣನೆಗೆ ತೆಗೆದುಕೊಳ್ಳದೇ, ಮತ್ತೆ–ಮತ್ತೇ ಮೇಲ್ಕಾಣಿಸಿದ ಹಣವನ್ನು ಪಾವತಿಮಾಡುವಂತೆ ಅಪೀಲುದಾರರಿಗೆ ಒತ್ತಾಯ ಮಾಡುತ್ತಿದ್ದರೆಂದು ಆದ್ದರಿಂದ ವಿಧಿಯಿಲ್ಲದೇ ಅಪೀಲುದಾರರು ಎರಡನೇ ಪ್ರತಿವಾದಿಯ ಮುಂದೆ ಒಂದು ದೂರನ್ನು ಸಲ್ಲಿಸಿದ್ದರೆಂದೂ, ಆದರೆ ಎರಡನೇ ಪ್ರತಿವಾದಿಯು ಸದರಿ ದೂರಿನ ಅಂಶಗಳನ್ನು ಕಾನೂನುರೀತ್ಯಾ ಪರೀಶಿಲನೆ ಮಾಡದೆಯೇ ಆದೇಶ ಹೊರಡಿಸಿರುತ್ತದೆಂದು, ಇದರಿಂದ ಅಪೀಲುದಾರರಿಗೆ ಅತ್ಯಂತ ನಷ್ಟಉಂಟಾಗಿರುತ್ತದೆಂದು ಆದ ಕಾರಣ ಗತ್ಯಂತರವಿಲ್ಲದೇ ಪ್ರಸ್ತುತ ಅಪೀಲನ್ನು ಈ ಪ್ರಾಧಿಕಾರದ ಮುಂದೆ ಈ ಕೆಳಕಂಡ ಕಾರಣಗಳ ಅಡಿಯಲ್ಲಿ ಸಲ್ಲಿಸಿರುವುದು ಕಂಡು ಬರುತ್ತದೆ.

> ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ, ರಾಯಚೂರು (ಎರಡನೇ ಪ್ರತಿವಾದಿ) ರವರು ಹೊರಡಿಸಿದ ಆದೇಶವು ಕಾನೂನು ಸಮ್ಮತವಾಗಿಲ್ಲವೆಂದೂ, ಸರಿ ಇರುವುದಿಲ್ಲವೆಂದು ಹಾಗೂ ವೇದಿಕೆಯು ನ್ಯಾಯಬದ್ಧ ಆದೇಶವನ್ನು ಹೊರಡಿಸಿಲ್ಲವೆಂದೂ, ವಿದ್ಯುತ್ ಕಾಯಿದೆ 2003 ಕಲಂ 56ರ ಪ್ರಕಾರ ಗ್ರಾಹಕರು ನಿಗಧಿತ ಹಣವನ್ನು ಡೆಪಾಸಿಟ್ ಮಾಡಿದ್ದಲ್ಲಿ ಸದರಿಯವರ ಸ್ಥಾವರಕ್ಕೆ ನೀಡಲಾದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬಾರದೆಂದು ಹಾಗೂ ಕಲಂ 56ರಲ್ಲಿ ನಮೂದಿಸಿದಂತೆ ಕಾಲಪರಿಮಿತಿಗೆ ಒಳಪಟ್ಟು ಬಳಸಿಕೊಳ್ಳಲಾದ ವಿದ್ಯುತ್ ಬಿಲ್ ಹಣವನ್ನು ಮಾತ್ರ ಪಾವತಿಸಿಕೊಳ್ಳಬೆಕಾಗುತ್ತದೆ.
>
> ಅಷ್ಟೇ ಅಲ್ಲದೇ ಮೇಲ್ಕಂಡ ಕಲಂಗಳ ಅನುಸಾರವಾಗಿ ಹಿಂಬಾಕಿ ಮೊತ್ತವನ್ನು ವಸೂಲಿಮಾಡಲು ಕಾಲಪರಿಮಿತಿಯನ್ನು ಕಾನೂನು ಅಡಿಯಲ್ಲಿ

ನೀಡಲಾಗಿರುತ್ತದೆಂದು ಅದರಂತೆ ಪ್ರಸ್ತುತ ಪ್ರಕರಣದಲ್ಲಿ ದಿನಾಂಕ 01.07.2018 ರಂದು ಪ್ರಥಮ ಬಾರಿಗೆ ಹಿಂಬಾಕಿ ಮೊತ್ತವು ಬಾಕಿ ಇರುವುದು ಕಂಡುಬಂದಿರುತ್ತದೆಂದು, ಆದ್ದರಿಂದ ದಿನಾಂಕ 01.07.2018ರಿಂದಲೇ ಕಾಲ ಪರಿಮಿತಿಯ ಅವಧಿಯು ಪ್ರಾರಂಭವಾಗಿರುತ್ತದೆಂದೂ, ಮಾನ್ಯ ಬಾಂಬೆ ಉಚ್ಚನ್ಯಾಯಲಯದ ತೀರ್ಪಿನ ಪ್ರಕಾರ 2 ವರ್ಷಗಳ ಕಾಲ ಪರಿಮಿತಿ ಮುಕ್ತಾಯಗೊಂಡಂತಹ ಹಿಂಬಾಕಿ ಮೊತ್ತವನ್ನು ಪಾವತಿಸುವಂತೆ ಗ್ರಾಹಕರಿಗೆ ಡಿಮಾಂಡ್ ಮಾಡಲು ಸಾಧ್ಯವಿಲ್ಲವೆಂದು ಆದರೆ ಪ್ರಸ್ತುತ ಪ್ರಕರಣದಲ್ಲಿ ದಿನಾಂಕ 11.11.2020 ರಂದು ಪ್ರಥಮ ಬಾರಿಗೆ ಅಪೀಲುದಾರರಿಗೆ ನೋಟಿಸು ಬಂದಿರುತ್ತದೆಂದು ಆದ್ದರಿಂದ ಒಂದನೇ ಪ್ರತಿವಾದಿಯು ಕಾಲ ಪರಿಮಿತಿ ಮುಕ್ತಾಯವಾದ ನಂತರ ಹಿಂಬಾಕಿ ಬಿಲ್ಲನ್ನು ಪಾವತಿ ಮಾಡುವಂತೆ ಗ್ರಾಹಕರಿಗೆ ಡಿಮ್ಯಾಂಡ್ ಮಾಡಿರುವುದು ಕಂಡುಬಂದಿರುತ್ತದೆಂದು, ಈ ರೀತಿ ಹಣ ಪಾವತಿ ಮಾಡುವಂತೆ ಕಳಿಸಿರುವಂತಹ ಡಿಮ್ಯಾಂಡ್ ನೋಟಿಸ್ (Demand Notice) ದಿನಾಂಕ 11.11.2020 ಕಾನೂನು ಸಮ್ಮತವಾಗಿರುವುದಿಲ್ಲವೆಂದು ಆದ ಕಾರಣ ಪ್ರಸ್ತುತ ಅಪೀಲನ್ನು ಸಲ್ಲಿಸಿರುತ್ತಾರೆಂದು ಹಾಗೂ ಅಪೀಲಿನಲ್ಲಿ ಕೋರಿಕೊಂಡಂತೆ ಎರಡನೇ ಪ್ರತಿವಾದಿಯು ಮಾಡಿದ (Annexure-A)ನಲ್ಲಿ ಕಂಡು ಬರುವಂತಹ ಆದೇಶವನ್ನು ತೆರುವುಗೊಳಿಸಿ ಸೂಕ್ತ ಆದೇಶವನ್ನು ಹೊರಡಿಸಬೇಕೆಂದು ಕೊರಿಕೊಂಡಿರುತ್ತಾರೆ.

3) ಅಪೀಲನ್ನು ನೊಂದಣಿ ಮಾಡಿಕೊಂಡ ನಂತರ ಈ ಪ್ರಾಧಿಕಾರವು ಉಭಯಪಕ್ಷಕಾರರಿಗೆ ಈ ಪ್ರಾಧಿಕಾರದ ಮುಂದೆ ಹಾಜರಾಗುವಂತೆ ತಿಳುವಳಿಕೆ ನೋಟಿಸನ್ನು ನೀಡಿರುತ್ತದೆ. ಅದರಂತೆ ಮೇಲ್ಮನವಿದಾರರು ತಮ್ಮ ವಕೀಲರ ಮೂಲಕ ಹಾಜರಾಗಿರುತ್ತಾರೆ ಹಾಗೂ ಒಂದನೇ ಪ್ರತಿವಾದಿ ತಾವೇ ಖುದ್ದಾಗಿ ಹಾಜರಾಗಿರುತ್ತಾರೆ ಹಾಗೂ ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ.

4) ಸದರಿ ತಕರಾರಿನಲ್ಲಿ ಒಂದನೇ ಪ್ರತಿವಾದಿಯವರು, ತಮ್ಮ ಉಪವಿಭಾಗ–2ರಲ್ಲಿ ಗ್ರಾಹಕರಿಗೆ ಹಿಂಬಾಕಿ ಮೊತ್ತ ರೂ. 60,14,208/– ಪಾವತಿಸುವಂತೆ ತಿಳಿಸಿದ್ದೇವೆಂದೂ, ಆದರೆ ಗ್ರಾಹಕರು ಈ ರೀತಿಯಾಗಿ ವಿಧಿಸಿದ ಹಿಂಬಾಕಿ ಮೊತ್ತವು ಕ್ರಮಬದ್ಧವಾಗಿಲ್ಲ ಎಂಬುದಾಗಿ ಆರೋಪಿಸಿ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ, ರಾಯಚೂರು, (ಎರಡನೇ ಪ್ರತಿವಾದಿ) ಇವರಿಗೆ ದೂರನ್ನು ಸಲ್ಲಿಸಿದ್ದರೆಂದು, ತದನಂತರ ಸದರಿ ಗ್ರಾಹಕ

ವೇದಿಕೆಯು ಉಭಯಪರ ವಾದವಿವಾದಗಳನ್ನು ಆಲಿಸಿ ಒಂದನೇ ಪ್ರತಿವಾದಿಯು ವಿಧಿಸಿದ ಹಿಂಬಾಕಿ ಮೊತ್ತವು ನಿಯಮಾನುಸಾರ ಇದೆಯೆಂದು ನಿರ್ಧರಿಸಿ ಅದರಂತೆ ಅಪೀಲುದಾರರಿಗೆ ಹಣವನ್ನು ಪಾವತಿಸಲು ಆದೇಶ ನೀಡಿರುತ್ತದೆಂದು, ಆದರೆ ಅಪೀಲುದಾರರು ಆ ರೀತಿ ಹಿಂಬಾಕಿ ಮೊತ್ತವನ್ನು ಪಾವತಿ ಮಾಡದೇ ಪ್ರಸ್ತುತ ಅಪೀಲನ್ನು ಸಲ್ಲಿಸಿರುತ್ತಾರೆಂದು ನುಡಿದಿರುತ್ತಾರೆ.

5) ಮತ್ತೇ ಮುಂದುವರೆದು ತಮ್ಮ ತಕರಾರಿನಲ್ಲಿ ಈ ಪ್ರಕರಣದ ಗ್ರಾಹಕರಿಗೆ ರಾಯಚೂರು ನಗರ, ಉಪವಿಭಾಗ–2, ಶಾಖೆ–4ರ ವ್ಯಾಪ್ತಿಯಲ್ಲಿ ಬರುವ ಆರ.ಆರ್. ಸಂಖ್ಯೆ HTR140 ಸ್ಥಾವರಕ್ಕೆ ಮೊದಲಿಗೆ 950 KVA ಸಂಪರ್ಕಿತ ಭಾರವನ್ನು ನೀಡಲಾಗಿತ್ತೆಂದು, ತದನಂತರ 100 KVA ಅಧಿಕ ಸಂಪರ್ಕಿತ ಭಾರವನ್ನು ದಿನಾಂಕ 01.06.2018ರಂದು ನೀಡಲಾಗಿರುತ್ತದೆಂದೂ ಅದೇ ರೀತಿ CTR 50/1 ರಿಂದ CTR 60/1 ದಿನಾಂಕ 01.06.2018ರಿಂದ ಅನ್ವಯವಾಗುವಂತೆ MC 6000 ಪಡೆಯಲಾಗಿತ್ತೆಂದು ಸದರಿ ಸ್ಥಾವರವು 1050 KVA ಸಂಪರ್ಕಿತ ಭಾರವನ್ನು ಹೊಂದಿದ್ದು ಹಾಗೂ ಅದರ ಮಾಪಕ ಸ್ಥಿರಾಂಕ 6000 ಇರುತ್ತದೆಂದು ನುಡಿದಿರುತ್ತಾರೆ.

6) ಮತ್ತೇ ಮುಂದುವರೆದು ತಮ್ಮ ಕಂದಾಯ ಉಪವಿಭಾಗದಲ್ಲಿ ಎಲ್ಲಾ ಸ್ಥಾವರಗಳ ಮಾಪಕ ಸ್ಥಿರಾಂಕವನ್ನು ಪರೀಕ್ಷಿಸಲಾಗಿ ಈ ಪ್ರಕರಣದ ಗ್ರಾಹಕರ ಸ್ಥಾವರದ ಮಾಪಕ ಸ್ಥಿರಾಂಕವು 6000 ಬದಲಿಗೆ ಮಾಪಕ ಸ್ಥಿರಾಂಕ 5000ರಂತೆ ದಿನಾಂಕ ಜುಲೈ 2018ರಿಂದ ಸಪ್ಟೆಂಬರ್ 2020ರವರೆಗೆ ಬಿಲ್ಲನ್ನು ಮಾಡಲಾಗಿದೆಯೆಂದು ಈ ವಿಷಯಕ್ಕೆ ಸಂಬಂಧಿಸಿದಂತೆ ಜುಲೈ 2018ರಿಂದ ಸಪ್ಟೆಂಬರ್ 2020ವರೆಗೂ ಮಾಪಕ ಸ್ಥಿರಾಂಕ 6000ರದವರೆಗೆ ರೂ. 60,14,208/–ಗಳಷ್ಟು ಶಾರ್ಟ್ ಕ್ಲೈಮ್ (Short Claim) ಮೊತ್ತವನ್ನು ಕಂಡು ಹಿಡಿಯಲಾಗಿರುತ್ತದೆಂದು ಇದಕ್ಕನುಗುಣವಾಗಿ ಗ್ರಾಹಕರಿಗೆ ದಿನಾಂಕ

25.09.2020ರಂದು ಸದರಿ ಮೊತ್ತವನ್ನು ಭರಿಸುವಂತೆ ತಿಳಿಸಿ ನೋಟಿಸ್‌ನ್ನು (Notice) ನೀಡಲಾಗಿರುತ್ತದೆಂದು, ತದನಂತರ ಈ ಮೊತ್ತವನ್ನು ಭರಿಸುವಂತೆ ತಂತ್ರಾಂಶದಲ್ಲಿ ನವೆಂಬರ್ 2020 ತಿಂಗಳಲ್ಲಿ ಒತ್ತಾಯ (ಡಿಮ್ಯಾಂಡ್) ಮಾಡಲಾಗಿರುತ್ತದೆಂದು ನುಡಿದಿರುತ್ತಾರೆ.

7) ಮತ್ತೆ ಮುಂದುವರೆದು ದಿನಾಂಕ 09.11.2020ರಂದು ಈ ಪ್ರಕರಣದ ಗ್ರಾಹಕರು ತಮ್ಮ ಸ್ಥಾವರಕ್ಕೆ ಪರಿಷ್ಕೃತ ಬಿಲ್ಲನ್ನು ನೀಡುವಂತೆ ಕೋರಿ ಅರ್ಜಿಯನ್ನು ಸಲ್ಲಿಸಿ, ಸದರಿ ಅರ್ಜಿಯಲ್ಲಿ ಶಾರ್ಟ್ ಕ್ಲೈಮ್ (Short Claim) ಮೊತ್ತ ರೂ. 60,14,208/– ಹೆಚ್ಚುವರಿಯಾಗಿ ಸೇರಿಸಲಾಗಿದೆಯೆಂದು, ಈ ಮೊತ್ತದ ಬಗ್ಗೆ ಯಾವುದೇ ವಿವರಗಳನ್ನು ನೀಡಿರುವುದಿಲ್ಲವೆಂದು ಮತ್ತು ತಮಗೆ ಯಾವುದೇ ನೋಟಿಸು (Notice) ನೀಡಿರುವುದಿಲ್ಲವೆಂದು ಈ ಎಲ್ಲಾ ಕಾರಣಗಳಿಂದ ಶಾರ್ಟ್ ಕ್ಲೈಮ್ (Short Claim) ಮೊತ್ತ ರೂ. 60,14,208/– ಬಿಲ್ಲಿಂದ ತೆಗೆದು ಪರಿಷ್ಕೃತ ವಿದ್ಯುತ್ ಬಿಲ್ಲನ್ನು ನೀಡುವಂತೆ ಕೋರಿಕೊಂಡಿದ್ದರೆಂದು ನುಡಿದಿರುತ್ತಾರೆ. ಮತ್ತೇ ಮುಂದುವರೆದು ಆದರೆ ತಾವು ಗ್ರಾಹಕರಿಗೆ ಮೊದಲನೇ ನೋಟಿಸ್‌ನ್ನು ಕೊಟ್ಟಿದ್ದೇವೆಂದು ಅಂತಿಮ ನೋಟಿಸ್ ನೀಡದ ಕಾರಣ ಶಾರ್ಟ್ ಕ್ಲೈಮ್ (Short Claim) ಮೊತ್ತವನ್ನು ಹಿಂಪಡೆಯಲಾಗಿತ್ತೆಂದು, ಆದರೆ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ, ರಾಯಚೂರು, ರವರು ತಮ್ಮ ಆದೇಶದಲ್ಲಿ ಗ್ರಾಹಕರಿಗೆ ವಿಧಿಸಲಾದ ಶಾರ್ಟ್ ಕ್ಲೈಮ್ (Short Claim) ಮೊತ್ತ ರೂ. 60,14,208/– ಸರಿಯಿರುತ್ತದೆಂದು ತೀರ್ಮಾನಿಸಿ ಅದೇ ಕಾರಣಕ್ಕೆ ಗ್ರಾಹಕರು ನವೆಂಬರ್ 2020 ತಿಂಗಳಿನ ವಿದ್ಯುತ್ ಬಿಲ್ ಜೊತೆಗೆ ಶಾರ್ಟ್ ಕ್ಲೈಮ್ (Short Claim) ಮೊತ್ತವನ್ನು ಸಹ ಭರಿಸಬೇಕಾಗಿ ಆದೇಶಿಸಿರುತ್ತದೆಂದು ನುಡಿದಿರುವುದು ಕಂಡು ಬರುತ್ತದೆ.

8) ಮತ್ತೆ ಮುಂದುವರೆದು ಒಂದನೇ ಪ್ರತಿವಾದಿ ತಮ್ಮ ತಕರಾರಲ್ಲಿ ತಾವು ನೋಟಿಸು ಹಾಗೂ ಪತ್ರವನ್ನು ಗ್ರಾಹಕರಿಗೆ ನೀಡುವ ಮೊದಲು ತಾವು ತಮ್ಮ ಸಹಾಯಕ ಲೇಕ್ಕಾಧಿಕಾರಿಗಳ ಜೊತೆ ಶಾರ್ಟ್ ಕ್ಲೈಮ್ (Short Claim) ವಿವರಗಳೊಂದಿಗೆ ಅಪೀಲುದಾರರ ಕೈಗಾರಿಕಾ ಘಟಕಕ್ಕೆ ಬೇಟಿಕೊಟ್ಟಿದ್ದೆವೆಂದು ಮತ್ತು ಸದರಿಯವರೊಂದಿಗೆ ಚರ್ಚಿಸಿದ್ದೆವೆಂದು ಆಗ ಅಪೀಲುದಾರರು ಕಂತುಗಳ ಮೂಲಕ ಸದರಿ ಶಾರ್ಟ್ ಕ್ಲೈಮ್ (Short Claim) ಮೊತ್ತವನ್ನು ಭರಿಸಲು ಅವಕಾಶ ಮಾಡಿಕೊಡಬೇಕೆಂದು ಕೋರಿಕೊಂಡಿದ್ದರೆಂದು ಇದಕ್ಕೆ ತಾವು ಸಹ ಒಪ್ಪಿ ಈ ಬಗ್ಗೆ ಒಂದು ಲಿಖಿತ ಅರ್ಜಿಯನ್ನು ಸಲ್ಲಿಸಲು ಗ್ರಾಹಕರಿಗೆ ಸೂಚಿಸಿದ್ದೆವೆಂದು ಆದರೆ ಗ್ರಾಹಕರು ಪುನಃ ತಮ್ಮ ಸೂಚನೆಗೆ ಸ್ಪಂದಿಸಿಲ್ಲವೆಂದು ನುಡಿದಿರುತ್ತಾರೆ.

9) ಇದಾದನಂತರ ತಾವು ಈ ವಿಷಯವಾಗಿ ಗ್ರಾಹಕರಿಗೆ ಪ್ರಾವಿಷನಲ್ ಅಸೆಸ್‌ಮೆಂಟ್ ಆರ್ಡರನ್ನು (Provisional Assessment Order) ರಿಜಿಸ್ಟರ್ ಪೋಸ್ಟ್ (Register Post) ಮೂಲಕ ದಿನಾಂಕ 18.11.2020ರಂದು ಕಳಿಸಿಕೊಟ್ಟಿದ್ದೇವೆಂದು, ಅದಾದ ಮೇಲೆ 05.01.2021ರಂದು ಅಂತಿಮ ನೋಟಿಸನ್ನು ಸಹ ಜಾರಿಗೊಳಿಸಿರುತ್ತೇವೆಂದು, ಅಷ್ಟೇ ಅಲ್ಲದೇ ಅಪೀಲುದಾರರು ಅಕ್ಟೋಬರ್ 2020ರಿಂದ ಮಾಪಕ ಸ್ಥಿರಾಂಕ 6000ದಂತೆ ಬಿಲ್ಲನ್ನು ಪ್ರತಿ ತಿಂಗಳು ಪಾವತಿಮಾಡುತ್ತಿದ್ದಾರೆಂದು, ಈ ಬಗ್ಗೆ ಯಾವುದೇ ತಕರಾರನ್ನು ಒಂದನೇ ಪ್ರತಿವಾದಿ ತಗಿದಿರುವುದಿಲ್ಲವೆಂದು ಆದ್ದರಿಂದ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಅಪೀಲುದಾರರು ನೀಡಬೇಕಾದ ಹಿಂಬಾಕಿ ಮೊತ್ತ ರೂ. 60,14,208/–ನ್ನು ಭರಿಸಲು ಸೂಚನೆ ನೀಡಬೇಕೆಂದು ಹಾಗೂ ಅಪೀಲನ್ನು ವಜಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

10) ಉಭಯಪಕ್ಷಕಾರರು ಸಲ್ಲಿಸಿದ ಮೇಲ್ಮನವಿ ಹಾಗೂ ತಕರಾರಿನ ಅಂಶಗಳನ್ನು ಪರಿಗಣಿಸಿ ಈ ಪ್ರಕರಣವನ್ನು ವಾದವಿವಾದಕ್ಕೆ ಮುಂದೂಡಲಾಗಿತ್ತು. ಅದರಂತೆ ಅಪೀಲುದಾರರ ಪರ ವಕೀಲರು ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ವಾದವನ್ನು ಮಂಡಿಸಿರುತ್ತಾರೆ, ಅದೇ ರೀತಿ ಒಂದನೇ ಪ್ರತಿವಾದಿ ಸಹ ಖುದ್ದು ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಪರ ವಾದವನ್ನು ಮಂಡಿಸರುತ್ತಾರೆ.

11) ಉಭಯಪರ ವಾದವಿವಾದಗಳನ್ನು ಕೇಳಿರುತ್ತೇನೆ ಹಾಗೂ ಕಡತದ ಪರೀಶಿಲನೆಯನ್ನು ಮಾಡಿರುತ್ತೇನೆ.

12) ಈ ಹಂತದಲ್ಲಿ ಮೇಲ್ಮನವಿಯ ಇತ್ಯರ್ಥಕ್ಕಾಗಿ ಈ ಕೆಳಕಂಡ ಅಂಶಗಳು ಮೂಡಿಬರುತ್ತವೆ:-

i. ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ, ರಾಯಚೂರು ರವರು ದಿನಾಂಕ 16.03.2021, ಪ್ರಕರಣ ಸಂಖ್ಯೆ: CGRF 11/2020, ಆದೇಶ ಸಂಖ್ಯೆ: ಅಅ/ಉಲೆನಿ/ಹಿಆಸ/2020-21/CYS-53, ಪ್ರಕರಣದಲ್ಲಿ ಹೊರಡಿಸಿರುವ ಆದೇಶವು ನಿರಂಕುಶ ಹಾಗೂ ಕಾನೂನು ಬಾಹಿರವಾಗಿರುತ್ತದೆಂದು ಮೇಲ್ಮನವಿದಾರರು ಸಾಬೀತುಪಡಿಸಿರುತ್ತಾರೆಯೇ?

ii. ಏನು ಆದೇಶ?

13) ಈ ಕೆಳಕಂಡ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಈ ರೀತಿ ಉತ್ತರಿಸಿದ್ದೇನೆ.

ಅಂಶ (i) – ನಕಾರಾತ್ಮಕವಾಗಿ

ಅಂಶ (ii) – ಕಡೆಯ ಆದೇಶದಂತೆ

## <u>ಕಾರಣಗಳು</u>

14) **<u>ಅಂಶ (i):</u>** ವಾದವಿವಾದದ ಸಮಯದಲ್ಲಿ ಮೇಲ್ಮನವಿದಾರರ ಪರ ವಕೀಲರು ಹಾಜರಾಗಿ ತಮ್ಮ ವಾದವನ್ನು ಮಂಡಿಸುತ್ತಾ ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ, ರಾಯಚೂರುರವರು ಹೊರಡಿಸಿರುವ ಪ್ರಶ್ನಿತ ಆದೇಶವು ಕಾನೂನು ಬದ್ಧವಾಗಿರುವುದಿಲ್ಲವೆಂದು, ಸದರಿ ವೇದಿಕೆಯು ಗ್ರಾಹಕರು ತನ್ನ ಮುಂದೆ ಹಾಜರು ಪಡಿಸಿದ ದಾಖಲಾತಿಗಳನ್ನು ಸರಿಯಾಗಿ ಪರಿಶೀಲನೆ ಮಾಡಿರುವುದಿಲ್ಲವೆಂದೂ, ಯಾವೂದೇ ನೋಟಿಸ್ ನೀಡದೇ, ಕಾಲಾವಕಾಶವನ್ನು ಕೊಡದೇ, ನವೆಂಬರ್ 2020 ತಿಂಗಳ ಬಿಲ್ಲಿನಲ್ಲಿ ಹೆಚ್ಚುವರಿಯಾಗಿ ರೂ. 60,14,208/– ರೂಪಾಯಿಗಳನ್ನು ಸೇರಿಸಲಾಗಿದೆಯೆಂದು ಯಾವುದೇ ತಿಂಗಳಲ್ಲಿ PF ರೆರ್ಕಾಡ್ 0.9ಗಿಂತ ಕಡಿಮೆ ದಾಖಲಾಗಿದ್ದರೆ KERC ಶರತ್ತುಗಳು 2006ರಲ್ಲಿರುವ ಶರತ್ತು 22.02 (a) ಪ್ರಕಾರ ಗ್ರಾಹಕರಿಗೆ ಸೂಚನೆ ನೀಡಿ ಮೂರು ತಿಂಗಳ ಕಾಲಾವಕಾಶ ನೀಡಿದ ನಂತರದ ತಿಂಗಳಲ್ಲಿ PF ರೆರ್ಕಾಡ್ 0.9ಗಿಂತ ಕಡಿಮೆ ದಾಖಲಾಗಿದ್ದರೆ ಆಗ ಮಾತ್ರ PF ದಂಡ ವಿಧಿಸಬಹುದೆಂದು ಅಷ್ಟೇ ಅಲ್ಲದೇ ಪ್ರತಿ ತಿಂಗಳು ತಮ್ಮ ಸ್ಥಾವರಕ್ಕೆ ಒಂದನೇ ಪ್ರತಿವಾದಿ ಪರ ಅಧಿಕಾರಿಗಳು ಬೇಟಿ ಕೊಟ್ಟು ಮೀಟರನ್ನು ಪರೀಶಿಲಿಸಿ ವಿದ್ಯುತ್ ಬಿಲ್ಲನ್ನು ಕೊಡುತ್ತಿದ್ದರೆಂದು, ಅದರಂತೆ ತಾವು ಹಣ ಪಾವತಿ ಮಾಡುತ್ತಿದ್ದೆವೆಂದು, ಆದರೇ ಇದ್ಯಾವುದನ್ನು ಗಮನಿಸದೆಯೇ ಒಂದನೇ ಪ್ರತಿವಾದಿಯು ಒಮ್ಮೆಲೇ ಎರಡು ವರ್ಷಗಳನಂತರ ಹಿಂದಿನ ಬಾಕಿ ಎಂದು ರೂ. 60,14,208/– ಪಾವತಿ ಮಾಡಲು ತಿಳಿಸಿರುವುದು ಸಮಂಜಸ ಆಗಿಲ್ಲವೆಂದು ನುಡಿದಿರುತ್ತಾರೆ. ಮತ್ತೇ ಮುಂದುವರೆದು KERC (Electricity Code) 2004, Regulation 4.13ರ ಪ್ರಕಾರ ಹಾಗೂ

Electricity Act 2003, ಕಲಂ 56 (2) ಅಡಿಯಲ್ಲಿ ಎರಡು ವರ್ಷಕ್ಕಿಂತ ಮೇಲ್ಪಟ್ಟ ಯಾವುದೇ ಬಾಕಿಯನ್ನು ವಸೂಲು ಮಾಡಲು ಕಾನೂನು ಅಡಿಯಲ್ಲಿ ಅವಕಾಶ ಇಲ್ಲವೆಂದು, ಆದರೆ ಈ ಎಲ್ಲವನ್ನು ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ, ರಾಯಚೂರುರವರು ಪರಿಶೀಲನೆ ಮಾಡಿರುವುದಿಲ್ಲವೆಂದು, ಅಷ್ಟೇ ಅಲ್ಲದೇ Annexure-Aನಲ್ಲಿ ತೋರಿಸಿದಂತೆ ಆದೇಶವನ್ನು ಮಾಡಿರುತ್ತಾರೆಂದು ಆದ ಕಾರಣ ತಾವು ಪ್ರಸ್ತುತ ಅಪೀಲನ್ನು ಸಲ್ಲಿಸಿರುತ್ತೇವೆಂದು, ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಶವಾಗಿ ಪರಿಗಣಿಸಿ ಅಪೀಲನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ. ತಮ್ಮ ವಾದವಿವಾದಕ್ಕೆ ಬೆಂಬಲಿತವಾಗಿ Maharashtra State Electricity Distribution Company Ltd., Sindhudurg Kudal Vs Electricity Ombudsman, Mumbai and Another 2019 SCC Online Bom 483 ತೀರ್ಪನ್ನು ಆದರಿಸಿರುತ್ತಾರೆ. ಮತ್ತೇ ಮಂದುವರೆದು ಮೇಲ್ಮನವಿದಾರರು ತಮ್ಮ ಅಪೀಲಿನ ಜೊತೆಯಲ್ಲಿ (Annexure-A) ರಲ್ಲಿರುವ ಪ್ರಕರಣ ಸಂಖ್ಯೆ: CGRF 11/2020 (ಆದೇಶ ಸಂಖ್ಯೆ: ಅಅ/ಉಲೆನಿ/ಹಿಆಸ/2020–21/CYS–53) ಆದೇಶದ ನಕಲನ್ನು, ಹಾಗೂ ತಮ್ಮ ಮತ್ತು ಪ್ರತಿವಾದಿಗಳ ನಡುವೇ ವ್ಯವಹರಿಸಿದಂತಹ ಪತ್ರಗಳ ನಕಲುಗಳನ್ನು ಸಲ್ಲಿಸಿ ಅಂತಿಮವಾಗಿ ಮೇಲ್ಮನವಿಯನ್ನು ಪುರಸ್ಕರಿಸಬೇಕೆಂದು, ಪ್ರಶ್ನಿತ ಆದೇಶವನ್ನು ತೆರವುಗೊಳಿಸಬೇಕೆಂದು ಕೊರುತ್ತಾ, ಒಂದು ವೇಳೆ, ಈ ಪ್ರಾಧಿಕಾರವು ಅಪೀಲನ್ನು ವಜಾ ಮಾಡಿದ್ದೇ ಆದಲ್ಲಿ ಪ್ರತಿವಾದಿಗಳಿಗೆ ನೀಡಬೇಕಾದ ಹಿಂಬಾಕಿ ಮೊತ್ತವನ್ನು ಕಂತುಗಳ ರೂಪದಲ್ಲಿ ನೀಡಲು ಅಪೀಲುದಾರರಿಗೆ ಅವಕಾಶ ಮಾಡಿಕೊಡಬೇಕೆಂದು ಹಾಗೂ ನ್ಯಾಯ ಮತ್ತು ಸಮಾನತೆಯ ದೃಷ್ಠಿಯಿಂದ ಆದೇಶವನ್ನು ಹೊರಡಿಸಬೆಕೆಂದು ಕೋರಿಕೊಂಡಿರುತ್ತಾರೆ.

15) ವಾದವಿವಾದದ ಕಾಲದಲ್ಲಿ ಪ್ರತಿವಾದಿಗಳ ಪರ ಒಂದನೇ ಪ್ರತಿವಾದಿ ಖುದ್ದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ವಾದವನ್ನು ಮಂಡಿಸಿರುತ್ತಾರೆ. ಸದರಿ ವಾದದ ಕಾಲದಲ್ಲಿ ತಮ್ಮ ತಕರಾರಿನಲ್ಲಿ ನುಡಿದಿರುವಂತಹ ಅಂಶಗಳನ್ನು ಪುನರುಚ್ಚರಿಸಿ, ಮತ್ತೆ ಮುಂದುವರೆದು ತಾವು ಯಾವುದೇ ದಂಡ ಅಥವಾ ತೆರಿಗೆಯನ್ನು ಮೇಲ್ಮನವಿದಾರರಿಗೆ ವಿಧಿಸಿಲ್ಲವೆಂದು, ಮೇಲ್ಮನವಿದಾರರು ಈಗಾಗಲೇ ಬಳಸಿಕೊಂಡಿರುವಂತಹ ವಿದ್ಯುತ್‌ನ ಶಾರ್ಟ್ ಕ್ಲೈಮ್ (Short Claim) ಮೊತ್ತವನ್ನು ಮಾತ್ರ ಭರಿಸುವಂತೆ ತಾವು ಕೋರಿಕೊಂಡಿರುತ್ತೇವೆಂದು, ಅರ್ಜಿದಾರರು ತಮ್ಮ ಮೇಲ್ಮನವಿಯಲ್ಲಿ ತೋರಿಸಿರುವ ಕಾರಣಗಳೆಲ್ಲವೂ ಸಮಂಜಸವಾದ ಕಾರಣಗಳು ಆಗಿರುವುದಿಲ್ಲವೆಂದೂ, ಆದ್ದರಿಂದ ಮೇಲ್ಮನವಿಯನ್ನು ವಜಾಮಾಡಬೇಕಾಗುತ್ತದೆಂದು ಮತ್ತು WP No. 202710/2017 and 202739/2017 (GM-KEB) ಹಾಗೂ WA 05/2009 GM-KEBನಲ್ಲಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯವು ನೀಡಿರುವ ತೀರ್ಪುಗಳ ಅನ್ವಯವು ಸಹ ಎದುರುದಾರರು ಶಾರ್ಟ್ ಕ್ಲೈಮ್ (Short Claim) ಮೊತ್ತವನ್ನು ಪಾವತಿಸಬೇಕಾಗಿರುತ್ತದೆಂದು ಈ ಎಲ್ಲಾ ಕಾರಣಗಳಿಂದ ಮೇಲ್ಮನವಿಯನ್ನು ವಜಾಗೊಳಿಸಿ ಸೂಕ್ತ ಆದೇಶ ಹೊರಡಿಸಬೇಕೆಂದು ಕೋರಿಕೊಂಡಿರುತ್ತಾರೆ ಹಾಗೂ ತಮ್ಮ ವಾದಕ್ಕೆ ಬೆಂಬಲಿತವಾಗಿ ಬೆಸ್ಕಾಂರವರು ಹೊರಡಿಸಿದ್ದರು ಎನ್ನಲಾದ ಸುತ್ತೋಲೆಯ ಜೆರಾಕ್ಸ್ ನಕಲನ್ನು ಹಾಗೂ WP No. 202710/2017 and 202739/2017 (GM-KEB) ಹಾಗೂ WA 05/2009 GM-KEBನಲ್ಲಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯವು ನೀಡಿರುವ ತೀರ್ಪುಗಳ ನಕಲುಗಳನ್ನು ಹಾಗೂ ತಮ್ಮ ಮತ್ತು ಅಪೀಲುದಾರರ ನಡುವೇ ವ್ಯವಹರಿಸಿದಂತಹ ಪತ್ರಗಳ ನಕಲುಗಳನ್ನು ಹಾಜರುಪಡಿಸಿರುತ್ತಾರೆ.

16) ಈ ರೀತಿಯಾಗಿ ಈ ಕಡತದ ಸಂಪೂರ್ಣ ಪರಿಶೀಲನೆ ಮಾಡಿ, ಉಭಯತ್ರರರ ವಾದವಿವಾದವನ್ನು ಆಲಿಸಿದ ನಂತರ ಕಂಡು ಬರುವುದೆನೆಂದರೆ, ಅಪೀಲುದಾರರು HTR140 ಸಂಖ್ಯೆಯ ವಿದ್ಯುತ್ ಸ್ಥಾವರದ ಗ್ರಾಹಕರಾಗಿದ್ದು ತಮ್ಮ ಸ್ಥಾವರಕ್ಕೆ ಮೊದಲಿಗೆ 950 KVA ಸಂಪರ್ಕಿತ ಭಾರವನ್ನು ಒಂದನೇ ಪ್ರತಿವಾದಿಯಿಂದ ಪಡೆದುಕೊಂಡಿದ್ದರೆಂದು, ತದನಂತರ 100 KVA ಅಧಿಕ ಸಂಪರ್ಕಿತ ಭಾರವನ್ನು ದಿನಾಂಕ 01.06.2018ರಂದು ಪಡೆದುಕೊಂಡಿದ್ದರೆಂದು ಅದೇ ರೀತಿ CTR 50/1ರಿಂದ CTR 60/1 ದಿನಾಂಕ 01.06.2018ರಿಂದ ಅನ್ವಯವಾಗುವಂತೆ AMC 6000 ಪಡೆಯಲಾಗಿತ್ತೆಂದೂ, ಒಟ್ಟಾರೆ ಅಪೀಲುದಾರರ ವಿದ್ಯುತ್ ಸ್ಥಾವರವು 1050 KVA ಸಂಪರ್ಕಿತ ಭಾರವನ್ನು ಹೊಂದಿದ್ದು ಅದರ ಮಾಪಕ ಸ್ಥಿರಾಂಕ 6000 ಇತ್ತು ಎಂಬುದಾಗಿ ಕಂಡು ಬರುತ್ತದೆ. ಈ ಅಂಶಗಳನ್ನು ಸಹ ಅಪೀಲುದಾರರು ತಮ್ಮ ವಾದವಿವಾದದ ಕಾಲದಲ್ಲಿ ಅಲ್ಲಗೆಳದಿರುವುದಿಲ್ಲ.

17) ಅಪೀಲುದಾರರ ಪ್ರಮುಖ ತಕರಾರು ಏನೆಂದರೆ ಎರಡನೇ ಪ್ರತಿವಾದಿಯವರು ಆದೇಶ ಹೊರಡಿಸುವಾಗ KERC (Electricity Code) 2004, Regulation 4.13ರ ಪ್ರಕಾರ ಹಾಗೂ Electricity Act 2003, ಕಲಂ 56 (2) ಅಡಿಯಲ್ಲಿ ಲಭ್ಯವಾಗುವಂತಹ ನಿಯಮಾನುಸಾರ ಆದೇಶ ಮಾಡಿಲ್ಲವೆಂದೂ, ಈ ಕಲಂಗಳ ಪ್ರಕಾರ ಎರಡು ವರ್ಷಕ್ಕಿಂತ ಮೇಲ್ಪಟ್ಟ ಯಾವುದೇ ಬಾಕಿಯನ್ನು ವಸೂಲಿ ಮಾಡಲು ಪ್ರತಿವಾದಿಗಳಿಗೆ ಕಾನೂನು ಅಡಿಯಲ್ಲಿ ಅವಕಾಶವಿಲ್ಲ ಎಂಬುದೇ ಆಗಿರುತ್ತದೆ. ಈ ಅಂಶದ ಬಗ್ಗೆ ಉಭಯಪಕ್ಷಕಾರರು ತಮ್ಮ ವಾದವನ್ನು ಮಂಡಿಸುವ ಕಾಲದಲ್ಲಿ ಈಗಾಗಲೇ ಮೇಲೆ ಅವಲೋಕಿಸಿರುವಂತಹ ತೀರ್ಪುಗಳನ್ನು ಆಧರಿಸಿರುತ್ತಾರೆ.

18) ಅಪೀಲುದಾರು ಆಧರಿಸಿದ Maharashtra State Electricity Distribution Company Ltd., Sindhudurg Kudal Vs Electricity Ombudsman, Mumbai and Another 2019 SCC Online Bom 483 ತೀರ್ಪನ್ನು ಪರಿಶೀಲನೆ ಮಾಡಿದಾಗ ಮಾನ್ಯ ಬಾಂಬೆ ಉಚ್ಚನ್ಯಾಯಾಲಯವು ಈ ಕೆಳಕಂಡಂತೆ ಅವಲೋಕಿಸಿರುವುದು ಕಂಡು ಬರುತ್ತದೆ:–

> *"The distribution licensee cannot demand charges for consumption of electricity for a period more than 2 years preceding the date of the first demand of such charges. In other words, the distribution licensee will have to raise a demand by issuing a bill and the bill may include the amount for the period preceding more than two years provided the condition set out in sub section 2 of section 56 is satisfied."*

ಅದೇ ರೀತಿ ಒಂದನೇ ಪ್ರತಿವಾದಿಯು ಆಧರಿಸಿದ WP No. 202710/2017 and 202739/2017 (GM-KEB), Between M/s. Shree Balaji Agro Industries V/s The Managing Director, GESCOM, Kalburgi and two others ತೀರ್ಪನ್ನು ಪರಿಶೀಲನೆ ಮಾಡಿದಾಗ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯವು ಈ ರೀತಿಯಾಗಿ ಅವಲೋಕಿಸಿರುವುದು ಕಂಡು ಬರುತ್ತದೆ:–

> *"21. This Court further relies on the law laid down by the Hon'ble Apex Court in the case of D.Cawasji & Co. – vs – The State of Mysore & Anr. reported in 1975 AIR 813 wherein the Apex Court while considering the scope of Section 17(1)(c) of the Limitation Act 1963 with reference to payments paid under a mistake, the period of limitation does not remain to run until the party has discovered the mistake. The relevant paragraph reads as under:-*
>
> > *"Section 17(1)(c) of the Limitation Act, 1963, provides that in the case of a suit for*

*relief on the ground of mistake, the period of limitation does not begin to run until the plaintiff has discovered the mistake or could, with reasonable diligence, have discovered it. In a case where payment is made under a mistake of law as contrasted with a mistake of fact, generally the mistake becomes known to the party only when a court makes a declaration as to the invalidity of the law. Though a party could, with reasonable diligence, discover a mistake of fact even before a court makes a pronouncement, it is seldom that a person can, even with reasonable diligence, discover a mistake of law before a judgement adjudging the validity of the law."*

*22. In the light of the law laid down by the Apex Court, the contention of the petitioner that the limitation commences to run within two years from the date on which the first payment became due, cannot be accepted.*

*23. The Apex Court has clearly held that the period of limitation commences only when the mistake is discovered. In the instant case it is not in dispute that the mistake came to light when auditors of the Company raised objections. Furthermore, the petitioner also lacs bonafides as a consumer and as a contracting party. He was well aware of his dues. Despite the same he has chosen or remained a mute spectator and has enjoyed the benefits accrued out of the results of short payments.*

*24. it is nowhere pleaded by the petitioner that the was unaware of the liability to pay at the rate of MC constant-200. The petitioner's conduct alone is responsible for the situation that he has got upon himself. Had he been a bonafide consumer, he would have immediately pointed out the anomaly in the minimum rates being charged."*

ಮತ್ತೊಂದು WA No. 05/2009 GM-KEB M/s. Ghousia College of Engineering, Ramnagara V/s Bengaluru Electricity Supply Company Limited and another ತೀರ್ಪಿನಲ್ಲಿ ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯವು:–

> *"20. In the result, what emerges is the validity or the claim for the period exceeding two years preceding the date of demand. In the facts and circumstances of the case, we hold that the first respondent did not raise any bill under HT-2B tariff as it was under a bonafide view that the installation correctly classified under the tariff HT-2A. The demand stemmed out of the audit observations which resulted in re-classification of the installation. A demand raised pursuant to re-classification cannot be brought within the teeth of Section 56(2) as also 29.08 of Supply Conditions for the simple reason that no demand could have been raised under HT-2B classification. Consequently, the question of its reflection as arrears of energy consumption charges would not arise at all."*

ಎಂಬುದಾಗಿ ಅವಲೋಕಿಸಿರುತ್ತದೆ.

19) ಈ ರೀತಿ ಉಭಯತ್ರರರು ಹಾಜರುಪಡಿಸಿದ ತೀರ್ಪುಗಳನ್ನು ಪರಿಶೀಲಿಸಿದಾಗ ಭಾರತ ಸಂವಿಧಾನ Article 141 ರನ್ವಯ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯವು ನೀಡಿದಂತಹ ತೀರ್ಪುಗಳನ್ನು ಈ ಪ್ರಾಧಿಕಾರವು ಆಧರಿಸಬೇಕಾಗುತ್ತದೆ. ಅದರಂತೆ ಪ್ರತಿವಾದಿಯು ಹಾಜರು ಪಡಿಸಿದ ತೀರ್ಪುಗಳನ್ನು ಪರಿಶೀಲನೆ ಮಾಡಿದಾಗ ಇಂತಹ ಪ್ರಕರಣಗಳಲ್ಲಿ ವಿದ್ಯುತ್ ಕಾಯ್ದೆ ಕಲಂ 56ರ ಅಡಿಯಲ್ಲಿ ಬಿಲ್ ನೀಡಿಕೆಯ ದೋಷದಿಂದಾಗಿ ಗ್ರಾಹಕರಿಂದ ಹಿಂಬಾಕಿಯನ್ನು ವಸೂಲು ಮಾಡುವಾಗ, ಈ ಹಿಂಬಾಕಿಯನ್ನು ಪತ್ತೆ ಮಾಡಿದ ದಿನಾಂಕದಿಂದ 2 ವರ್ಷಗಳ ಅವಧಿಯ ಕಾಲ

ಪರಿಮಿತಿಯಲ್ಲಿ ಕಂಪನಿಯು ವಸೂಲಾತಿ ಮಾಡಬಹುದಾಗಿರುತ್ತದೆ, ಅಂದರೇ ಯಾವುದೇ ಕಂದಾಯ ಹಿಂಬಾಕಿಯ ಮೊತ್ತವನ್ನು ಲೆಕ್ಕ ಹಾಕುವಾಗ ಎರಡು ವರ್ಷದ ಅವಧಿಗೆ ಸೀಮಿತಗೊಳಿಸದೇ ನಷ್ಟ ಉಂಟಾಗಿರುವ ಸಂಪೂರ್ಣ ಅವಧಿಗೆ ಹಿಂಬಾಕಿಯನ್ನು ವಿಧಿಸಬೇಕಾಗುತ್ತದೆ. ಅಂದರೆ ಹಿಂಬಾಕಿಯನ್ನು ಪತ್ತೆ ಮಾಡಿದ ದಿನಾಂಕದಿಂದ ಎರಡು ವರ್ಷದೊಳಗಾಗಿ ವಸೂಲು ಮಾಡಲು ಕ್ರಮ ಕೈಗೊಳ್ಳಬೇಕಾಗುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಸಪ್ಟೆಂಬರ್ 2020ನಲ್ಲಿ ಒಂದನೇ ಪ್ರತಿವಾದಿ ತಮ್ಮ ಕಂದಾಯ ಉಪವಿಭಾಗದಲ್ಲಿ ಇರುವಂತಹ ಎಲ್ಲಾ ಸ್ಥಾವರಗಳ ಮಾಪಕ ಸ್ಥಿರಾಂಕಗಳನ್ನು ಪರೀಕ್ಷಿಸಿದಾಗ ಅಪೀಲುದಾರ ಸ್ಥಾವರದ ಮಾಪಕ ಸ್ಥಿರಾಂಕವು 6000ದ ಬದಲಿಗೆ ಮಾಪಕ ಸ್ಥಿರಾಂಕ 5000ದಂತೆ ಜುಲೈ 2018ರಿಂದ ಸಪ್ಟೆಂಬರ್ 2020ರವರೆಗೆ ಬಿಲ್ ಮಾಡಲಾಗಿರುವುದನ್ನು ಕಂಡಿರುತ್ತಾರೆ. ಆದ್ದರಿಂದ ಈ ಮಾಪಕ ಸ್ಥಿರಾಂಕ 6000ದಂತೆ ಲೆಕ್ಕಾಚಾರ ಮಾಡಿದಾಗ ರೂ. 60,14,208/– ಶಾರ್ಟ್ ಕ್ಲೈಮ್ (Short Claim) ಮೊತ್ತವನ್ನು ಗ್ರಾಹಕರು ಪಾವತಿಸಬೇಕಾಗುತ್ತದೆ. ಅಂದರೆ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯವು ನೀಡಿದ ತೀರ್ಪುಗಳ ಅನ್ವಯ ಸಪ್ಟೆಂಬರ್ 2020 ಮಾಹೆಯಿಂದ ಕಾಲ ಪರಿಮಿತಿಯು ಹಿಂಬಾಕಿ ವಸೂಲಿ ಮಾಡಲು ಪ್ರಾರಂಭವಾಗುತ್ತದೆ. ಅಂದರೆ ಒಂದನೇ ಪ್ರತಿವಾದಿಯು ನಿಗಧಿತ ಅವಧಿಗೆ, ಎರಡು ವರ್ಷಗಳ ಕಾಲ ಪರಿಮಿತಿಯಲ್ಲಿಯೇ ಹಿಂಬಾಕಿ ಪಾವತಿ ಮಾಡುವಂತೆ ನೋಟಿಸನ್ನು ಅಪೀಲುದಾರರಿಗೆ ನೀಡಿರುವುದು ಸ್ಪಷ್ಟವಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಅಪೀಲುದಾರರು ಒಂದನೇ ಪ್ರತಿವಾದಿಯು ಡಿಮ್ಯಾಂಡ್ ಮಾಡಿದ ಹಿಂಬಾಕಿ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಎರಡನೇ ಪ್ರತಿವಾದಿ (CGRF) ರವರು ಕೂಲಂಕುಶವಾಗಿ ಪರಿಗಣಿಸಿ ಆದೇಶ ಹೊರಡಿಸಿರುತ್ತಾರೆ. ಸದರಿ ಆದೇಶ (Annexure-A)ನಲ್ಲಿ ಈ

ಪ್ರಾಧಿಕಾರವು ಹಸ್ತಕ್ಷೇಪ ಮಾಡುವಂತಹ ಯಾವುದೇ ಸಕಾರಣಗಳು ಕಾಣುತ್ತಿಲ್ಲ. ಆದ ಕಾರಣ ಹೆಚ್ಚಿನ ಚರ್ಚೆಯಿಲ್ಲದೆ ಎರಡನೇ ಪ್ರತಿವಾದಿಯವರು (CGRF) ಹೊರಡಿಸಿರುವ (Annexure-A)ನಲ್ಲಿ ಇರುವಂತಹ ಆದೇಶವು ನ್ಯಾಯೋಚಿತವಾಗಿದೆಯೆಂದು, ಈ ಪ್ರಾಧಿಕಾರದ ಹಸ್ತಕ್ಷೇಪ ಅಗತ್ಯತೆ ಇಲ್ಲವೆಂದು ಮತ್ತು ಅರ್ಜಿದಾರರು ಸಲ್ಲಿಸಿದ ಅಪೀಲನ್ನು ವಜಾ ಮಾಡಬೇಕಾಗುತ್ತದೆಂದು ನಿರ್ಧರಿಸಿರುತ್ತೇನೆ.

20) ವಾದವಿವಾದದ ಕಾಲದಲ್ಲಿ ಅಪೀಲುದಾರರು ಹಾಗು ಅವರ ಪರ ವಕೀಲರು ಹಾಜರಿದ್ದು ಒಂದು ವೇಳೆ ಈ ಪ್ರಾಧಿಕಾರವು ಎರಡನೇ ಪ್ರತಿವಾದಿ (CGRF)ರವರ ಆದೇಶವನ್ನು ಎತ್ತಿ ಹಿಡಿದು ಹಿಂಬಾಕಿಯನ್ನು ಪ್ರತಿವಾದಿಗಳಿಗೆ ಕಟ್ಟಿಕೊಡಲು ಆದೇಶ ಮಾಡಿದ್ದೇ ಆದಲ್ಲಿ ತಮಗೆ ಕಂತುಗಳ ರೂಪದಲ್ಲಿ ಹಣವನ್ನು ಪಾವತಿ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ಆದ ಕಾರಣ ಹಾಗೂ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನದಲ್ಲಿ ಇರಿಸಿಕೊಂಡು ಎರಡನೇ ಪ್ರತಿವಾದಿಯ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯವಿಲ್ಲವೆಂದು ತೀರ್ಮಾನಿಸುತ್ತಾ ಒಂದನೇ ಅಂಶಕ್ಕೆ ನಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

21) **<u>ಅಂಶ (ii):</u>** ಮೇಲಿನ 1ನೇ ಅಂಶಕ್ಕೆ ಉತ್ತರಿಸಿದ ಕಾರಣಗಳಿಗಾಗಿ ಈ ಕೆಳಕಂಡಂತೆ ಮಾಡಿರುವ ಆದೇಶ.

**ಸಂಖ್ಯೆ: OMB/G/G-427/2021/D-1577** **ದಿನಾಂಕ: 25.08.2021**

## <u>ಆದೇಶ</u>

1) ಅಪೀಲುದಾರರು ಸಲ್ಲಿಸಿದ ಮೇಲ್ಕಂಡ ಅಪೀಲನ್ನು ವಜಾ ಮಾಡಲಾಗಿದೆ ಹಾಗೂ ಪ್ರಕರಣ ಸಂಖ್ಯೆ: CGRF 11/2020, ಆದೇಶ ಸಂಖ್ಯೆ: ಅಅ/ಉಲೆನಿ/ಹಿಆಸ/2020–21/CYS-53, ರಲ್ಲಿ ಎರಡನೇ ಪ್ರತಿವಾದಿಯು ದಿನಾಂಕ 16.03.2021ರಂದು ಮಾಡಿದ ಆದೇಶವನ್ನು ಸ್ಥಿರಗೊಳಿಸಲಾಗಿದೆ (Annexure-A).

2) ಅಪೀಲುದಾರರು ಎರಡನೇ ಪ್ರತಿವಾದಿಯ CGRF 11/2020, ಆದೇಶ ಸಂಖ್ಯೆ: ಅಅ/ಉಲೆನಿ/ಹಿಆಸ/2020-21/CYS-53ರಲ್ಲಿ ದಿನಾಂಕ 16.03.2021ರಂದು ಮಾಡಿದಂತಹ ಆದೇಶದ ಅನ್ವಯ ತಾವು ನೀಡಬೇಕಾದ ಹಿಂಬಾಕಿ ಮೊತ್ತವನ್ನು ಒಂದನೇ ಪ್ರತಿವಾದಿಗೆ ಈ ಆದೇಶದ ದಿನಾಂಕದಿಂದ ಆರು ಮಾಸಿಕ ಸಮಕಂತುಗಳಲ್ಲಿ ಪಾವತಿಸತಕ್ಕದ್ದು. ಇದೇ ರೀತಿಯಾಗಿ ಒಂದನೇ ಪ್ರತಿವಾದಿಯು ಅಪೀಲುದಾರರಿಂದ ಹಿಂಬಾಕಿ ಮೊತ್ತವನ್ನು ವಸೂಲಿ ಮಾಡಿಕೊಳ್ಳಲು ಅರ್ಹರಾಗಿರುತ್ತಾರೆ. ಒಂದು ವೇಳೆ ಅಪೀಲುದಾರರು ಮೇಲೆ ಆದೇಶಿಸಿದಂತೆ ಹಿಂಬಾಕಿ ಮೊತ್ತವನ್ನು ಪಾವತಿಸದೇ ಹೋದ ಪಕ್ಷದಲ್ಲಿ ಒಂದನೇ ಪ್ರತಿವಾದಿಯವರು ತಮಗೆ ಬರಬೇಕಾದ ಹಿಂಬಾಕಿ ಮೊತ್ತವನ್ನು ನಿಯಮಾನುಸಾರ ವಸೂಲಿ ಮಾಡಿಕೊಳ್ಳತಕ್ಕದ್ದು.

ಸಹಿ/-
(ಆರ್. ಶಾರದ)
ವಿದ್ಯುಚ್ಛಕ್ತಿ ಲೋಕಪಾಲರು

**ಪ್ರತಿಯನ್ನು:**

1) ಶ್ರೀ ಕೊಳ್ಳ ನರೇಂದ್ರ ಬಾಬು,
ಶ್ರೀ ಲಕ್ಷ್ಮೀ ವೆಂಕಟಾದ್ರಿ ಆಗ್ರೊ ಫುಡ್ಸ್,
ಮಂಚಲಾಪೂರ ರಸ್ತೆ,
ರಾಯಚೂರು - 584101.

2) ಶ್ರೀರಂಗ ಅಸೋಸಿಯೇಟ್ಸ್,
#1, 2ನೇ ಮಹಡಿ, ಅಮರ್ ಟೊವರ್ಸ್,
1ನೇ ಅಡ್ಡರಸ್ತೆ, ಗಾಂಧಿನಗರ,
ಬೆಂಗಳೂರು - 560009.

3) ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ),
ಕಾರ್ಯ ಮತ್ತು ಪಾಲನ ನಗರ ಉಪ ವಿಭಾಗ-2, ಗುವಿಸಕಂನಿ,
ಮುಖ್ಯ ಗುವಿಸಕಂನಿ ಬಿಲ್ಡಿಂಗ್ ಎದುರು,
ರಾಯಚೂರು - 584101.

4) ಅಧ್ಯಕ್ಷರು,
ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ,
ಕಾರ್ಯ ಮತ್ತು ಪಾಲನ ವೃತ್ತ, ಗುವಿಸಕಂನಿ,
ಬಸವೇಶ್ವರ ವೃತ್ತದ ಹತ್ತಿರ, ಎಲ್.ಐ.ಸಿ ಕಛೇರಿ ಎದುರು,
ರಾಯಚೂರು-584101.

5) ಮಾನ್ಯ ಅಧ್ಯಕ್ಷರು, ಕವಿನಿಆ ರವರ ಆಪ್ತ ಕಾರ್ಯದರ್ಶಿ
6) ಮಾನ್ಯ ಸದಸ್ಯರು (M), ಕವಿನಿಆ ರವರ ಆಪ್ತ ಕಾರ್ಯದರ್ಶಿ
7) ಮಾನ್ಯ ಸದಸ್ಯರು (R), ಕವಿನಿಆ ರವರ ಆಪ್ತ ಕಾರ್ಯದರ್ಶಿ
8) ಕಾರ್ಯದರ್ಶಿ, ಕವಿನಿಆ ರವರ ಆಪ್ತ ಸಹಾಯಕರು.